CC-O. In Public Domain. Digitized by eGangotri

ಯಾರ ಪ್ರೀತಿ ಹೆಚ್ಚು ?

ನಾಟಕ

ಕೈವಾರ ರಾಜಾರಾವ್

ಪ್ರಕಾಶಕರು

ಡಿ. ವಿ. ಕೆ. ಮೂರ್ತಿ

ಕೃಷ್ಣಮೂರ್ತಿಪುರಂ : : ಮೈಸೂರು ೪

Sri Vidyabharathi Book Centre, Sringeri

CC-O. In Public Domain. Digitized by eGangotri
ಬಿಡಿ ನಾಟಕವಾಗಿ ಪ್ರಥಮ ಮುದ್ರಣ : ೧೯೮೨

© ಕೈವಾರ ರಾಜಾರಾವ್

ಸೂಚನೆ

ಈ ನಾಟಕವನ್ನು ಅಭಿನಯಿಸುವವರು ಲೇಖಕರ ವಿಳಾಸಕ್ಕೆ 15 ರೂ ಸೌರವಧನ ಕಳುಹಿಸಿ ಲಿಖಿತ ಅನುಮತಿ ಪಡೆಯಬೇಕು.

ವಿಳಾಸ

ಕೈವಾರ ರಾಜಾರಾವ್

276, 5ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೊನಿ

ಬೆಂಗಳೂರು 560 019

ಬೆಲೆ : ರೂ 1.50

ಮುದ್ರಕರು

ಶ್ರೀ ಗುರು ಪ್ರಿಂಟರ್ಸ್, ಸೀತಾರಾಮರಾವ್ ರಸ್ತೆ

ಮೈಸೂರು ೫

Sri Vidyabharati Digital Centre, Sringeri

CC-O. In Public Domain. Digitized by eGangotri

ಯಾರ ಪ್ರೀತಿ ಹೆಚ್ಚು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರಗಳು

೧. ಗೀತ : ಇಪ್ಪತ್ತು ವರುಷದವಳು.

೨. ಯಶೋದೆ : ಅವಳ ಅಕ್ಕ : ಸುಮಾರು ಮೂವತ್ತು ವರುಷ.

೩. ಜಯ : ಗೀತಳ ತಾಯಿಯ ಚಿಕ್ಕ ತಮ್ಮ,
ಇಪ್ಪತ್ತು ನಾಲ್ಕು ವರುಷ.

೪. ಮೋಹನ : ಜಯನ ಸಹಪಾಠಿ, ಅದೇ ವಯಸ್ಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರ ಪ್ರೀತಿ ಹೆಚ್ಚು ?

[ಯಶೋದೆಯ ಮನೆಯ ಹಜಾರ. ರಂಗದ ಎಡಬಲಕ್ಕೆ ಒಂದೊಂದು ಕೊಠಡಿಯ ಬಾಗಿಲೂ, ಎಡುರಿಗೆ ಒಳಕ್ಕೆ ಹೋಗುವ ಬಾಗಿಲೂ ಕಾಣಿಸುತ್ತಿದೆ. ಶ್ರೀಮಂತರ ಮನೆಯಂತೆ ಸುತ್ತ ಸೋಫ ಕುರ್ಚಿಗಳಿವೆ. ಮಧ್ಯೆ ಒಂದು ದುಂಡು ಟೀಬಲ್. ಅದರ ಮೇಲೆ ವೃತ್ತಪತ್ರಿಕೆಗಳೂ ಮಾಸಪತ್ರಿಕೆಗಳೂ ಇವೆ. ತೆರೆ ಮೇಲೇಳುವ ಕಾಲಕ್ಕೆ ಗೀತ ವೃತ್ತಪತ್ರಿಕೆಯನ್ನೋದುತ್ತ ಎದುರುಗಡೆ ಒಂದು ಸೋಫದಮೇಲೆ ಕುಳಿತಿದ್ದಾಳೆ. ಅವಳು ಒಳ್ಳೆ ಚೆಲುವೆ, ಇಪ್ಪತ್ತು ವರುಷ ದವಳು, ವಿದ್ಯಾವಂತೆ. ಕ್ಷಣ ಹೊತ್ತಿನ ಮೇಲೆ ಮೋಹನ ಪ್ರವೇಶಿಸುವನು. ಅವನಿಗೆ ಸುಮಾರು ೨೫-೨೪ರ ವಯಸ್ಸು. ಎಣ್ಣೆಗೆಂಪಿನ ಬಣ್ಣ. ಮೈ ಕೈ ತುಂಬಿಕೊಂಡು ಒಳ್ಳೆ ಆರೋಗ್ಯವಂತನಂತೆ ಕಾಣುತ್ತಾನೆ. ಮಧ್ಯಾಹ್ನ ಸುಮಾರು ನಾಲ್ಕುಘಂಟೆಯ ಸಮಯ]

ಗೀತ—ಪರೀಕ್ಷೆ ಮುಗಿಯಿತೆ ?

ಮೋಹನ—ಹೂ. ಮುಗಿಯಿತು (ಇನ್ನೊಂದು ಸೋಫದಮೇಲೆ ಕೂಡುವನು.)

ಗೀತ—ಹೇಗೆ ಮಾಡಿದ್ದಿ. ಪೇಪರು ಸುಲಭವಾಗಿತ್ತೆ?

ಮೋಹನ—ಪೇಪರು ಸುಲಭವಾಗಿರಲಿಲ್ಲ. ಆದರೆ ನಾನೇನೋ ಚೆನ್ನಾಗಿಯೇ ಮಾಡಿದ್ದೇನೆ. ಒಟ್ಟಿನಲ್ಲಿ ಫಸ್ಟ್ ಕ್ಲಾಸಿನಲ್ಲೇ ಪಾಸಾಗಬಹುದು ಅಂದುಕೊಂಡಿದ್ದೇನೆ.

ಗೀತ—ಜಯ ಹೇಗೆಮಾಡಿದ್ದಾನಂತೆ ?

ಮೋಹನ—ಅವನು ನನಗೆ ಸಿಗಲಿಲ್ಲ. ಚೆನ್ನಾಗಿಯೇ ಮಾಡಿದ್ದೇನೆ ಅಂತ ಅವನ ಸ್ನೇಹಿತ ಶಂಕರನ ಮುಂದೆ ಹೇಳಿದನಂತೆ. ಅವನು ನನ್ನ ಮುಂದೆ ಹೇಳಿದ. ಚೆನ್ನಾಗಿಯೇ ಮಾಡಿರಬಹುದು. ಆದರೆ ಅವನಿಗೆ ಈ ದಿನದ ಪ್ರಶ್ನೆಗಳು ಅಷ್ಟು ಸುಲಭವಾಗಿದ್ದಿರಲಾರವು. ನಾನು ಇವನ್ನು ಓದಿಕೋ ಅಂದಾಗ, ಅದೇನು ಅಷ್ಟು ಮುಖ್ಯವಲ್ಲ ಅಂತ ಅಂದು ಬಿಟ್ಟಿದ್ದ.

ಗೀತ—ಹಾಗಿದ್ದರೆ ...

ಮೋಹನ—ಗಾಬರಿಯೇನೂ ಇಲ್ಲ. ಬೇರೆ ಪ್ರಶ್ನೆಗಳು ಸ್ವಲ್ಪ ಸುಲಭವಾಗಿಯೇ ಇದ್ದುವು. ಇಷ್ಟಕ್ಕೂ ಈ ಎಂ. ಎ. ಪರೀಕ್ಷೆಯಲ್ಲಿ ಸಾಮಾನ್ಯವಾಗಿ ಫೇಲ್ ಮಾಡಿಸದಿರುವುದೇ ವಾಡಿಕೆ. ಎರಡನೆ ತರಗತಿಯಲ್ಲೋ ಮೂರನ್ನೇ ತರಗತಿಯಲ್ಲೋ ಪಾಸು ಮಾಡಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತ—ಅಂದರೆ ಎಂ. ಎ. ಪರೀಕ್ಷೆಯಲ್ಲಿ ಮೊದಲನೆ ತರಗತಿಯಲ್ಲಿ ಪಾಸಾಗ ದಿದ್ದರೆ ವಾಸ್ತವವಾಗಿ ಫೇಲ್ ಆದ ಹಾಗೇ ಏನು ?

ಮೋಹನ—ಹಾಗೆ ಸುಲಭವಾಗಿ ಹೇಳುವುದಕ್ಕಾಗುವುದಿಲ್ಲ. ಎಂ. ಎ. ಡಿಗ್ರಿ ಬರುವುದಿಲ್ಲವೆ ? ಅದಕ್ಕೆ ಇರುವ ಬೆಲೆ ಇದ್ದೇ ಇದೆ.

ಗೀತ—ಅದು ಹೋಗಲಿ. ಇನ್ನತ್ತಿಗೆ ಪರೀಕ್ಷೆ ಮುಗಿಯಿತು ತಾನೆ? ಇನ್ನು ಓದುಮುಗಿಯಿತು ಅನ್ನು.

ಮೋಹನ—ಹೂ. ಮುಗಿಯಿತು. ಇನ್ನು ಜೇಕಾದಷ್ಟು ಸಿನಿಮಾ ನೋಡ ಬಹುದು, ಹರಟೆ ಹೊಡೆಯಬಹುದು.

ಗೀತ—ಹೂ. ಹಾಗೇ ಊರಿಗೂ ಹೋಗಬಹುದು.

ಮೋಹನ—ಏಕೆ? ನಾನಿಲ್ಲಿರುವುದು ನಿನಗಿಷ್ಟವಿಲ್ಲವೆ?

ಗೀತ—ಹಾಗುಂಟೆ? ನೀನೇ ಹೇಳು.

ಮೋಹನ—ಮತ್ತೆ ಊರಿಗೆ ಹೋಗೆಂದು ಏಕೆ ಹೇಳುತ್ತಿ?

ಗೀತ—ಊರಿಗೆ ಹೋಗೆಂದು ಹೇಳಿದೆನೆ? ಏನೋ ಪರೀಕ್ಷೆಯಕಾಲ ಬಂದ ಮೇಲೆ, ಹಾಸ್ಟಲಿನಲ್ಲಿ, ಸ್ನೇಹಿತರು ಓದಿಗೆ ಅಡ್ಡ ಬರುತ್ತಾರೆ. ಅವರ ಅವಾಂತರ ತಪ್ಪಲಿ ಅಂತ ನಿಮ್ಮ ತಂದೆ ನಿನ್ನನ್ನು ನಮ್ಮ ಮನೆ ಯಲ್ಲಿಟ್ಟುಕೊಳ್ಳುವಂತೆ ನಮ್ಮ ತಂದೆಗೆ ಹೇಳಿದರು. ಜೊತೆಗೆ ಜಯ ಕೂಡ ನಿನ್ನ ಕ್ಲಾಸಿನವನೇ. ಮೊದಲಿನಿಂದಲೂ ನೀವಿಬ್ಬರೂ ಒಟ್ಟಿಗೆ ಓದುತ್ತಿದ್ದವರು.

ಮೋಹನ—ಜೊತೆಗೆ ನೀನು ಬೇರೆ ಇದ್ದಿ.

ಗೀತ—ನನಗೂ ನಿನ್ನ ಓದಿಗೂ ಏನು ಸಂಬಂಧ?

ಮೋಹನ—ಸಂಬಂಧವಿಲ್ಲದೆ ಉಂಟೆ. ಅದು ಮಾನಸಿಕವಾದದ್ದು. ಹಸು ಗಳು ಹಾಲು ಕರೆಯುವಾಗ ಸಂಗೀತ ಬಾರಿಸಿದರೆ ಹೆಚ್ಚು ಹಾಲು ಕೊಡುತ್ತವೆ ಅಂತ ಪೇಪರಿನಲ್ಲಿ ಓದಿಲ್ಲವೆ, ಹಾಗೆ ಅಥವಾ ಹಿಂದಿನ ಪ್ರಣಯ ಕತೆಗಳಲ್ಲಿ ಹೇಳಿರುವ ಹಾಗೆ ರಾಣಿಯರು ಅಥವಾ ಪ್ರೇಯ ಸಿಯರು ಎದುರಿಗಿದ್ದಾಗ ಯೋಧರು ಹೆಚ್ಚು ಶೌರ್ಯವನ್ನೂ ಜಾಣ ತನವನ್ನೂ ಪ್ರದರ್ಶಿಸುತ್ತಿದ್ದರಲ್ಲವೆ? ಹಾಗೆ ಅಂತಿಟ್ಟುಕೋ.

ಗೀತ—ಹಾಗಾದರೆ ನಾನೇನು ರಾಣಿಯೋ ಪ್ರೇಯಸಿಯೋ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಹನ—ರಾಣಿಯೂ ಹೌದು ಪ್ರೇಯಸಿಯೂ ಹೌದು.

ಗೀತ—ಹಾಗಾಗಲಾರದು. ನೀನು ಮನಸ್ಸಿನಲ್ಲಿ ಮಂಡಿಗೆಯನ್ನುಂಡ ಹಾಗೆ ಆಯಿತು. ಅಷ್ಟೆ. ಆದರೂ ನಿನಗೆ ಪರೀಕ್ಷೆ ಪಾಸಾಗುವುದರಲ್ಲಿ–ಅದೂ ಮೊದಲನೆಯ ತರಗತಿಯಲ್ಲಿ ಪಾಸಾಗುವುದರಲ್ಲಿ—ನಾನೇನಾದರೂ ಪರೋಕ್ಷವಾಗಿ ಕಾರಣಳಾಗಿದ್ದರೆ ಅದು ನನಗೆ ಸಂತೋಷದ ವಿಷಯ. ಆ ಮಾತಿರಲಿ. ಊರಿಗೆ ಹೋಗುವ ಮಾತೆತ್ತಿದೆನಲ್ಲಾ, ಅದಕ್ಕೆ ಆಪಾರ್ಥ ಮಾಡಿಕೊಳ್ಳಬೇಡ. ನೀನು ಊರಿಗೆ ಬೇಗ ಹೋಗಬೇಕು ಅನ್ನುವುದು ನನ್ನ ಇಷ್ಟವಲ್ಲ. ಒಂದೆರಡು ದಿನ ಹಾಯಾಗಿ ತಮಾಷೆಯಾಗಿ ಸಿನಿಮಾಗಿನಿಮಾ ನೋಡಿಕೊಂಡು ಇರೋಣ ಅಂತಲೇ ಇದ್ದೆ. ಆದರೆ ಈ ಮಧ್ಯಾಹ್ನವೇ ನಿನ್ನ ತಂದೆಯವರಿಂದ ಕಾಗದ ಬಂದಿದೆ 'ಇವತ್ತಿಗೆ ಪರೀಕ್ಷೆ ಮುಗಿಯಿತು. ಮೋಹನನನ್ನು ಬೇಗನೆ ಊರಿಗೆ ಕಳುಹಿಸುವುದು'—ಅಂತ.

ಮೋಹನ—ಓಹೋ ! ಅದಕ್ಕೊ ಈ ಮಾತು. ಆಗಲಿ ಹೋದರಾಯಿತು. ಕೆಲವು ದಿನ ಕಳೆದ ಮೇಲೆ ಹೋದರಾಯಿತು. ಏನವಸರ ?

ಗೀತ—ಸಂತೋಷ, ಹಾಗೇಮಾಡು.

ಮೋಹನ—ಪರೀಕ್ಷೆಯ ಗಲಾಟೆಯಲ್ಲಿ ಈಚೆಗೆ ಒಂದು ಸಿನೀಮಾಕ್ಕೂ ಹೋಗಿಲ್ಲ. ಈ ಸಂಜೆ ಹೋಗೋಣ ಏಳು.

ಗೀತ—ಅಕ್ಕ ಯಶೋದೆ ?

ಮೋಹನ—ಅವರೂ ಬರಲಿ.

ಗೀತ—ಆಗಲಿ. ಅಕ್ಕನಿಗೆ ಹೇಳುತ್ತೀನೆ. ಹೋಗು ಕೈಕಾಲು ತೊಳೆದು ಕೊಂಡು ಏಳು. ಕಾಫಿ ತಿಂಡಿ ಸಿದ್ಧವಾಗಿದೆ.

ಮೋಹನ—ಹೂ. ಆಗಲಿ. (ಒಳಗೆ ಹೋಗುವುದರಲ್ಲಿರಲು ಆಪ್ತ ಹೊತ್ತಿಗೆ ಜಯ ಬರುವನು).

ಜಯ—ಏನಯ್ಯಾ ಆಗಲೇ ಬಂದುಬಿಟ್ಟಿದ್ದಿ. ನಿನಗೆ ಪ್ರಶ್ನೆಗಳು ಸುಲಭವಾಗಿತ್ತು ಅಂತ ತೋರುತ್ತೆ.

ಗೀತ—ಹೌದು, ಸುಲಭವಾಗಿತ್ತಂತೆ. ಅವನು ಅದನ್ನೀ ಜೆನ್ನಾಗಿ ಓದಿ ಕೊಂಡಿದ್ದನಂತೆ. ನೀನು ಅದು ಮುಖ್ಯವಲ್ಲ ಅಂದುಬಿಟ್ಟಯಂತೆ ?

CC-O. In Public Domain. Digitized by eGangotri

ಜಯ—ಓಹೋ,ಎಲ್ಲಾ ವರದಿ ಆಗಿದೆಯೋ. ಹೌದು, ನಾನದನ್ನು ಓದಿರಲಿಲ್ಲ.

ಮೋಹನ—ಆದರೇನು. ನಿನಗೆ ತಿಳಿದುವೇ ಬೇರೆ ಪ್ರಶ್ನೆಗಳೂ ಇತ್ತಲ್ಲ. ನೀನೂ ಚೆನ್ನಾಗಿಯೇ ಮಾಡಿರಬೇಕು.

ಜಯ—ಹೂ. ಪಾಸಾಗುವುದಕ್ಕೆ ಅನುಮಾನವಿಲ್ಲ. ಆದರೆ ಫಸ್ಟ್‌ಕ್ಲಾಸು ಬರುತ್ತೋ ಇಲ್ಲವೋ ಅಂತ ಅನುಮಾನ.

ಮೋಹನ—ಒಟ್ಟಿನಲ್ಲಿ ಬರುತ್ತೆ ಬಿಡು. ಯೋಚಿಸಬೇಡ.

ಜಯ—ಪರೀಕ್ಷೆ ಮುಗಿದಮೇಲೆ ಯೋಚನೆಮಾಡಿ ಏನು ಪ್ರಯೋಜನ ?

ಗೀತ—ಯೋಚನೆ ಏಕೆ? ದೇವರು ಮಾಡಿಸಿದ ಹಾಗೆ ಆಗುತ್ತೆ.

ಜಯ—ಅಮ್ಮ ನಿಜ ಅನ್ನು.

ಗೀತ—ಹೋಗಲಿ ಏಳಿ. ಕೈಕಾಲು ತೊಳೆದುಕೊಳ್ಳಿ. ಕಾಫಿ ತಿಂಡಿ ಸಿದ್ಧವಾಗಿದೆ. ನಮ್ಮದೆಲ್ಲಾ ಆಯಿತು.

ಜಯ
ಮೋಹನ } ಹೂ.

(ಇಬ್ಬರೂ ಒಳಗೆ ಹೋಗುವರು. ಗೀತ ಪುನಃ ಬಂದು ಪೇಪರನ್ನು ಓದುತ್ತಾ ಕುಳಿತುಕೊಳ್ಳುವಳು. ಕ್ಷಣ ಹೊತ್ತಿನಮೇಲೆ ಅವಳ ಅಕ್ಕ, ಯಶೋದೆ ಬರುವಳು).

ಯಶೋದೆ—ಜಯ, ಮೋಹನ ಯಾರೂ ಬರಲಿಲ್ಲವೇನೆ?

ಗೀತ—ಇಬ್ಬರೂ ಬಂದರು. ಕೈಕಾಲು ತೊಳೆದುಕೊಳ್ಳಲು ಒಳಗೆ ಹೋಗಿದ್ದಾರೆ.

ಯಶೋದೆ—ಸರಿ. ಮಾಣೀಗೆ ತಿಂಡಿಕೊಡುವಂತೆ ಹೇಳಿದ್ದೀನೆ. ಕಾಫಿ ಆ ದೊಡ್ಡ ಥರ್ಮಾಸ್‌ಫ್ಲಾಸ್ಕಿನಲ್ಲಿ ಹಾಕಿಡಿಸಿದ್ದೀನೆ.

ಗೀತ—ಸರಿ, ಹಾಗಾದರೆ ಕುಳಿತುಕೋ.

ಯಶೋದೆ—ಪರೀಕ್ಷೆಯಲ್ಲಿ ಹೇಗೆ ಮಾಡಿದ್ದಾರಂತೆ. ಪೇಪರು ಸುಲಭವಾಗಿತ್ತೋ ಕಷ್ಟವಾಗಿತ್ತೊ ವಿಚಾರಿಸಿದೆಯಾ ?

ಗೀತ—ಹೂ. ಪೇಪರು ಕಷ್ಟವಾಗೇ ಇತ್ತಂತೆ. ಮೋಹನನಷ್ಟು ಚೆನ್ನಾಗಿ ಜಯ ಮಾಡಿಲ್ಲವಂತೆ. ಆದರೆ ಯಾರಿಗೂ ಪಾಸಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು.

ಯಶೋದೆ—ಅಷ್ಟಾದರೆ ಸರಿ, ಜಯ ಯಾವಾಗಲೂ ಒಂದು ಕೈ ಕೆಳಗೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಹನನಷ್ಟು ಬುದ್ಧಿವಂತನಲ್ಲ. ಮೋಹನನಿಗೆ ಅವನ ತಂದೆ ಬರೆವ ಕಾಗದದ ವಿಷಯವನ್ನು ಹೇಳಿದೆಯಾ ?

ಗೀತ—ಹೂ. ಆದರೆ ಅವನು ಇನ್ನೂ ಕೆಲವು ದಿನದವರೆಗೆ ಊರಿಗೆ ಹೋಗುವುದಿಲ್ಲವಂತೆ. ಈಗ ನನ್ನನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿದ್ದಾನೆ.

ಯಶೋದೆ—ನೀನೊಬ್ಬಳೇ ಅವನ ಜೊತೆಗೆ ಹೋಗಬಾರದೆಂದು ನಾನು ಹೇಳಿರಲಿಲ್ಲವೆ ?

ಗೀತ—ಜೊತೆಗೆ ನೀನೂ ಬರಬೇಕೆಂದು ಹೇಳಿದ್ದಾನೆ.

ಯಶೋದೆ—ಅದು ಸರಿ. ಅವನಿಗೆ ಅದರಲ್ಲೆಲ್ಲಾ ಮಾನಮರ್ಯಾದೆ ಗೊತ್ತು.

ಗೀತ—ಅಪ್ಪನಿಂದ ಕಾಗದ ಬಂತಲ್ಲ. ಅದನ್ನು ನೀನು ನನಗೆ ತೋರಿಸಲೇ ಇಲ್ಲ. ಏನು ಬರೆದಿದ್ದಾನೆ ?

ಯಶೋದೆ—ಏನು ಬರೆದಿದ್ದಾನೆ ಮಹಾ. ಎಲ್ಲಾ ಆರೋಗ್ಯವಾಗಿದ್ದೇವೆ ಅಂತ ಬರೆದಿದ್ದಾನೆ. ಅದೆಲ್ಲೋ ಬಿದ್ದಿರಬೇಕು. ತೋರಿಸುತ್ತೇನೇಳು —ಮತ್ತೆ ಇನ್ನೊಂದು ವಿಚಾರ ನಿನ್ನನ್ನು ಕೇಳಬೇಕು ಅಂತಿದ್ದೆ. ನೀನು ಹೀಗೇ ಇರುವುದಕ್ಕೆ ಆಗುವುದಿಲ್ಲ. ನಿನ್ನ ಮುದುವೆಯ ವಿಚಾರ ನೀನು ನಿರ್ಧರ ಮಾಡಬೇಕು.

ಗೀತ—ನಾನೇನು ನಿರ್ಧರಮಾಡೋದು. ನೀವೇ ಅದನ್ನೆಲ್ಲಾ ನಿರ್ಧರಮಾಡಿ ಬಿಟ್ಟಿರೋ ಹಾಗಿದೆಯಲ್ಲ.

ಯಶೋದೆ—ಹೌದು, ನಿರ್ಧರಮಾಡಿದ್ದೇವೆ, ನಿಜ. ಜಯ ನಿನಗೆ ತಾಯಿಯ ತಮ್ಮನಾಗಬೇಕು. ಸೋದರ ಕಡೆ ಕೊಟ್ಟು ತರುವುದು ಮೊದಲಿನಿಂದ ಬಂದ ವಾಡಿಕೆ. ಇಲ್ಲದಿದ್ದರೆ ತನ್ನ ಕಡೆ ಬಳಗ ಸಂಬಂಧ ತಪ್ಪಿ ಹೋಗುವುದೆಂದು ಅಮ್ಮ ಹೇಳುತ್ತಾಳೆ. ಜಯನೂ ಬುದ್ಧಿವಂತ. ಈ ಸಲ ಎಂ. ಎ. ಪರೀಕ್ಷೆಗೆ ಕಟ್ಟಿದ್ದಾನೆ. ನೋಡುವುದಕ್ಕೂ ಸುಂದರನಾಗಿದ್ದಾನೆ, ಅವನಿಗಿಂತ ಒಳ್ಳೆಯ ವರ ಎಲ್ಲಿ ಸಿಗುತ್ತೆ ಹೇಳು.... ಏನು ? ನೀನು ಮಾತೇ ಆಡುವುದಿಲ್ಲವಲ್ಲ ಮತ್ತೆ.

ಗೀತ—ಏನು ಮಾತಾಡಬೇಕು. ನೀವು ಮಾಡಿರುವ ಏರ್ಪಾಟಿಗೆ ನನಗೂ ಒಪ್ಪಿಗೆ ಇದೆ. ಯಾವ ಕಾರಣದಿಂದ ನಾನು ಬೇಡ ಅಂತ ಹೇಳಲಿ.

ಯಶೋದೆ—ನೀನು ಏನಾದ್ರೂ ಬಂದ ಹಾಗೆ ಮಾಡು. ಸಣ್ಣ ವಿಷಯಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪುವುದಕ್ಕೂ ಬಿಡೋದಕ್ಕೂ ಕಾರಣ ಹೇಳುವುದಕ್ಕೆ ಬರುವುದಿಲ್ಲ. ಕಾರಣವೇ ಇಲ್ಲದೆ ಮನಸ್ಸು ಒಪ್ಪಬಹುದು ಅಥವಾ ಬಿಡಬಹುದು. ನಾವು ನಿನ್ನಇಷ್ಟಕ್ಕೆ ವಿರೋಧವಾಗಿ ಹೋಗಬೇಕೆನ್ನುವುದಿಲ್ಲ. ನೀನು ಸಂಕೋಚಪಡದೆ ನಿನ್ನ ಮನಸ್ಸಿನಲ್ಲಿರುವುದನ್ನು ಹೇಳು.

ಗೀತ—ನೀನು ಹಾಗೆ ಕೇಳಿದರೆ ನನಗೆ ಏನು ಹೇಳುವುದಕ್ಕೂ ತೋಚುವುದೇ ಇಲ್ಲ.

ಯಶೋದೆ—ನೀನೇನೋ ಮನಸ್ಸಿನಲ್ಲಿಟ್ಟುಕೊಂಡಿದ್ದಿ ಅಂತ ಕಾಣುತ್ತೆ. ಸಂಕೋಚವಿಲ್ಲದೆ ಹೇಳು.

ಗೀತ—ಉಹು. ನನಗೇನು ಹೇಳುವುದಕ್ಕೂ ಬಾಯೇ ಬರದು.

ಯಶೋದೆ—ಹಾಗೆಂದರೆ ಹೇಗೆ. ಇನ್ನು ನಿನ್ನ ಮದುವೆ ಮುಂದೆ ಹಾಕುವುದಕ್ಕಾಗುವುದಿಲ್ಲ. ಜಯನ ಪರೀಕ್ಷೆ ಮುಗಿಯಲಿ ಅಂತ ಅಪ್ಪ ಅಮ್ಮ ಕಾಡಿದ್ದರು. ಈಗ ಅದು ಮುಗಿಯಿತು.

ಗೀತ—ಹೌದು. ಅವರು ಅಷ್ಟು ಆಸೆಪಟ್ಟು ಗೊತ್ತುಮಾಡಿಕೊಂಡಿರುವಾಗ ?

ಯಶೋದೆ—ಗೊತ್ತುಮಾಡಿರೋದೇ ಅಲ್ಲ. ಇದುವರೆಗೂ ನೋಡಿದ್ದರಲ್ಲಿ ನಿನಗೂ ಜಯ ಒಪ್ಪಿಗೆ ಇರುವ ಹಾಗೇ ತೋರಿತು. ಅದಕ್ಕೇ ಅವರೂ ಸುಮ್ಮನಿದ್ದರು. ಈಗ ಅವನು ನಿನಗೆ ಇಷ್ಟವಿಲ್ಲ ಅಂತ ಹೇಳಿದರೆ....

ಗೀತ—ಇಲ್ಲ ಅಕ್ಕ. ಮೊದಲಿನಿಂದಲೂ ಜಯನಿಗೂ ಗೊತ್ತು, ನಾನೇ ಅವನ ಹೆಂಡತಿ ಅಂತ. ಅವನೂ ಒಪ್ಪಿಕೊಂಡಿದ್ದಾನೆ. ಆ ಆಸೆಯಲ್ಲೇ ಇದ್ದಾನೆ. ಅವನಿಗೂ ಅಸಮಾಧಾನವಾಗಬಾರದು.

ಯಶೋದೆ—ಅವನನ್ನು ಸಮಾಧಾನಪಡಿಸುವ ವಿಚಾರ ನನಗೆ ಬಿಡು.

ಗೀತ—ನಿಜವಾಗಲೂ ನನಗೆ ಅವನು ಬೇಡ ಅಂತ ಅನಿಸಿಲ್ಲ.

ಯಶೋದೆ—ನಿನ್ನ ಬಾಯಲ್ಲಿ ನಿಜಾಂಶ ಹೊರಡಿಸೋದೆ ಕಷ್ಟ. ಅಲ್ಲವೆ, ನಾನೀಗ ಎರಡು ತಿಂಗಳಿಂದ ನಿನ್ನನ್ನು ನೋಡುತ್ತಿಲ್ಲವೆ ? ನಿನ್ನ ಮನಸ್ಸು ಮೊದಲಿನಂತಿಲ್ಲ ಅನ್ನುವುದು ನನಗೆ ತಿಳಿಯದೆ ? ಹೌದೋ ಅಲ್ಲವೋ ನೀನೇ ಹೇಳು. ಇರೋ ವಿಚಾರವನ್ನು ಹೇಳೀ ಅಂದರೆ....

ಗೀತ—ನೀನೇ ಹೇಳು.

ಯಶೋದೆ—ಆಗಲಿ, ನಾನೇ ಹೇಳುತ್ತೀನೆ. ಮೋಹನ ಬಂದಾಗಿನಿಂದ ನಿನ್ನ ಮನಸ್ಸಿನಲ್ಲಿ ಹೊಸ ಬದಲಾವಣೆಯಾಗಿಲ್ಲವೇನೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತ—ಅಕ್ಕ, ನಿನ್ನ ಹತ್ತಿರ ನಾನು ಯಾವುದನ್ನೂ ಮುಚ್ಚುಮರೆಮಾಡುವ ಹಾಗಿಲ್ಲ. ಹೊಟ್ಟೇಲಿಲ್ಲಿ ಹುದುಗಿಸಿಕೊಂಡಿದ್ದರೂ ಬಗೆದು ತೆಗೆದು ಬಿಡುತ್ತೀಯೆ.

ಯಶೋದೆ—ಈಗ ಹೇಳು ನಿಜಾನ.

ಗೀತ—ನಿಜ ಹೇಳಿದರೆ ನಂಬುತ್ತೀಯೇನಕ್ಕಾ ?

ಯಶೋದೆ—ನಿಜ ಹೇಳಿದರೇ ಮತ್ತೆ. ಮರೆಮಾಚಿದೆಯೋ ನೋಡಿಕೋ.

ಗೀತ—ಇಲ್ಲ. ನಿಜವಾಗಿ ಹೇಳಬೇಕೆಂದರೆ ನೀನು ಹೇಳಿದ ಮಾತು ಸತ್ಯ. ಮೊದಲಿನಿಂದ ಜಯನೇ ನನ್ನ ಗಂಡ ಅಂತ ಎಲ್ಲರೂ ಹೇಳಿದ್ದಾರೆ. ನನಗೂ ಅವನಲ್ಲಿ ಪ್ರೇಮವಿದೆ. ನನ್ನನ್ನೂ ಅವನು ಪ್ರೀತಿಸುತ್ತಾನೆ. ನೀನು ಹೇಳಿದ ಹಾಗೆ ಮೋಹನ ಬರುವವರೆಗೂ ನಾನು ಅನ್ಯತಃ ಭಾವಿಸಿರಲಿಲ್ಲ. ಅವನು ಬಂದು ನನ್ನ ಹೃದಯದಲ್ಲಿ ಒಂದು ಆಂದೋಳನವನ್ನೇ ನಡೆಸಿದ್ದಾನೆ. ಒಂದು ಸಲ ಅವನು ನನ್ನಲ್ಲಿ ಪ್ರೇಮಭಿಕ್ಷೆಯನ್ನು ಕೂಡ ಬೇಡಿದ್ದಾನೆ. ಅನೇಕ ವೇಳೆ ನನ್ನ ಮನಸ್ಸು ಅವನ ಕಡೆ ವಾಲುತ್ತಿದೆ. ಆದರೆ ನಾನು ಯಾವುದನ್ನೂ ಖಂಡಿತವಾಗಿ ನಿರ್ಧರಮಾಡಲಾರದವಳಾಗಿದ್ದೇನೆ. ಇಬ್ಬರೂ ವಿದ್ಯಾವಂತರು, ಶ್ರೀಮಂತರು, ರೂಪವಂತರು. ನಾನು ಯಾರನ್ನು ಮದುವೆಯಾಗಲಿ ಹೇಳು.

ಯಶೋದೆ—ನೀನು ಯಾರನ್ನು ಹೆಚ್ಚಾಗಿ ಪ್ರೀತಿಸುತ್ತಿ, ಹೇಳು.

ಗೀತ—ನನ್ನ ಮನಸ್ಸಿನಲ್ಲಿ ಯಾರೂ ಹೆಚ್ಚಿಲ್ಲ, ಯಾರೂ ಕಡಿಮೆಯಿಲ್ಲ.

ಯಶೋದೆ—ಹಾಗಾದರೆ ಯಾರನ್ನು ಮದುವೆಯಾಗುವುದಾದರೂ ನಿನ್ನ ಮನಸ್ಸು ನೊಂದುಕೊಳ್ಳುವುದಿಲ್ಲ ತಾನೆ ?

ಗೀತ—ಇಲ್ಲ.

ಯಶೋದೆ—ಹಾಗಾದರೆ ಇನ್ನೊಂದು ವಿಷಯವನ್ನು ಈಗ ತಿಳಿಯಬೇಕು, ಅಷ್ಟೆ.

ಗೀತ—ಏನದು ?

ಯಶೋದೆ—ಇವರಿಬ್ಬರಲ್ಲಿ ಯಾರ ಪ್ರೀತಿ ಹೆಚ್ಚು, ಯಾರು ನಿನ್ನನ್ನು ಹೆಚ್ಚು ಪ್ರೀತಿಸುತ್ತಾರೆ, ಯಾರ ಗುಣ ಹೆಚ್ಚು—ಎಂಬುದನ್ನು ತಿಳಿಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತ—(ಬೇಡುವವಳಂತೆ) ನೀನು ಅಷ್ಟು ತಿಳಿಸಿದರೆ.... (ನಿರಾಶೆಯಿಂದ) ಅಷ್ಟು ಸುಲಭವೆ ಅದು ?

ಯಶೋದೆ—ಅದರ ಯೋಚನೆ ನಿನಗೇಕೆ? ಹೇಗೋ ಅಂತೂ ಯಾರ ಪ್ರೀತಿ ಹೆಚ್ಚು ಎನ್ನುವುದನ್ನು ನಿನಗೆ ತಿಳಿಯಪಡಿಸಿದರೆ ಆಯಿತೋ ಇಲ್ಲವೋ. ಅಂಥವರನ್ನು ನೀನು ಮದುವೆಯಾಗುತ್ತೀ ತಾನೆ ?

ಗೀತ—ಹೂ !

ಯಶೋದೆ—ಈ ಮಾತಿಗೆ ನಿನ್ನ ಮನಸ್ಸಿನ ಒಪ್ಪಿಗೆಯೂ ಇದೆ ತಾನೆ?

ಗೀತ—ಖಂಡಿತವಾಗಿ, ಖಂಡಿತವಾಗಿ ಇದೆ.

ಯಶೋದೆ—ಹಾಗಾದರೆ ನೀನು ಆ ಎಡಗಡೆ ಕೊಠಡಿಯೊಳಕ್ಕೆ ಹೋಗಿ ಬಾಗಿಲು ಹಾಕಿಕೋ. ನಾನು ಕೂಗುವವರೆಗೂ ಬರಬೇಡ.

ಗೀತ—ಹಾಗೇ ಆಗಲಿ (ಎಂದು ಹೇಳಿ ಎಡ ಕೋಣೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಳ್ಳುವಳು.)

ಯಶೋದೆ—(ಒಳಕ್ಕೆ ಹೋಗಿ) ಜಯಾ! ಮೋಹನಾ! ಆದೇನು ಇನ್ನೂ ತಿಂಡಿ ತೀರ್ಥ ಮುಗಿಯಲಿಲ್ಲವೆ ? (ಎನ್ನುವಳು)

ಜಯ—(ಒಳಗಿನಿಂದಲೇ) ಮುಗಿಯದೆ ಏನು (ಎಂದು ಹೇಳುತ್ತಾ ಹೊರಗೆ ಬರುವನು. ಆವನೊಡನೆ ಮೋಹನನೂ ಯಶೋದೆಯೂ ಬಂದು ಸೋಫಗಳ ಮೇಲೆ ಕೂಡುವರು)

ಮೋಹನ—ಪರೀಕ್ಷೆ ಪ್ರಶ್ನಪತ್ರಿಕೆ ವಿಚಾರ ಮಾತನಾಡುತ್ತಾ ನಿಧಾನವಾಗಿ ತಿಂಡಿತಿನ್ನುತ್ತಿದ್ದೆವು. ಅದಕ್ಕೇ ತಡವಾಯಿತು.

ಯಶೋದೆ—ತಡವಾದರಾಯಿತು. ಅವಸರವೇನು ಪರೀಕ್ಷೆ ಹೇಗಿದ್ದರೂ ಮುಗಿದು ಹೋಯಿತು. ಇನ್ನು ಬಿಡುವೇ ತಾನೇ ?

ಮೋಹನ—ಹೌದು . ಕೂಗಿದಿರಲ್ಲ. ಏನಾದರೂ ಕೆಲಸವಿದೆಯೇನು ?

ಯಶೋದೆ—ಇಲ್ಲ. ನಿನಗೇನಾದರೂ ಕೆಲಸವಿದೆಯೇ ?

ಮೋಹನ—ಇವತ್ತಿನ ಪರೀಕ್ಷೆಯ ವಿಷಯವಾಗಿ ಒಂದು ಕಾರ್ಡು ಬರೆದು ತಂದೆಯವರಿಗೆ ತಿಳಿಸಬೇಕು. ಆವರಿಗೆ ನಾಳೆ ಕಾಗದ ತಲುಪದಿದ್ದರೆ ಕಾಗದ ತಲುವುವವರೆಗೂ ಅವರ ಮನಸ್ಸು ತಳಮಳಗೊಳ್ಳುತ್ತಿರುತ್ತದೆ. ಒಂದು ಕ್ಷಣ ಮಹಡಿಯ ಮೇಲೆ ಹೋಗಿ ಒಂದು ಕಾಗವ ಬರೆದು ಬಂದುಬಿಡುತ್ತೇನೆ. ಇನ್ನೂ ನೋಡಿ ಹೆಚ್ಚಿಗೆ ಹೊತ್ತಾಗದೆ.

CC-O. In Sri Vidyabharati Book Corner, Sringeri

CC-O. In Public Domain. Digitized by eGangotri

ಯಶೋದೆ—ಹೂ. ಹಾಗೇ ಮಾಡು.....

[ಮೋಹನ ಹೋಗುವನು. ಮಹಡಿ ಮೆಟ್ಟಲು ಹತ್ತಿದ ಸದ್ದಾಗುವುದು.]

ಯಶೋದೆ—ಜಯ! ನಿನ್ನನ್ನು ಒಂದು ಪ್ರಶ್ನೆ ಕೇಳಬೇಕು ಅಂತಿದ್ದೇನೆ. ಅತಿ ಮಹತ್ವದ ಪ್ರಶ್ನೆ ಅದು. ನಿನ್ನ ಜೀವನದ ರೀತಿಯನ್ನೇ ಬದಲಾಯಿಸುವಂತಹುದು.

ಜಯ—ಅದೇನು ಅಂತಹ ಮಹತ್ವದ ಪ್ರಶ್ನೆ? ಹೇಳು.

ಯಶೋದೆ—ನಿನ್ನ ಮದುವೆಯ ವಿಚಾರ. ನೀನು ಮದುವೆಯಾಗಲಿರುವ ಹೆಣ್ಣಿನ ವಿಚಾರ.

ಜಯ—(ನಗುತ್ತಾ) ಇಷ್ಟೇ ತಾನೆ? ಇದರಲ್ಲಿ ಮಹತ್ವವೇನು ಬಂತು? ಹತ್ತು ವರುಷದಿಂದ ಗೊತ್ತಾಗೇ ಇದೆ ನನ್ನ ಹೆಂಡತಿ ಗೀತ ಅಂತ.

ಯಶೋದೆ—ನೀನವಳನ್ನು ಪ್ರೀತಿಸುತ್ತೀಯಾ?

ಜಯ—ಚೆನ್ನಾಗಿ ಕೇಳುತ್ತಿ, ಪ್ರೀತಿಸದೆ ಏನು?

ಯಶೋದೆ—ಅವಳು ನಿನ್ನನ್ನು ಪ್ರೀತಿಸುತ್ತಾಳೆಯೆ?

ಜಯ—ಪ್ರೀತಿಸದೆ ಏನು? (ಆಸುಮಾನದಿಂದ) ಅದೇನೋ ನಿನ್ನ ಪ್ರಶ್ನೆ ನನಗೆ ಅರ್ಥವಾಗುವುದಿಲ್ಲ. ಕರೆ ಅವಳನ್ನ, ನನ್ನೆದುರಿಗೇ ಕೇಳು. ಪ್ರೀತಿಸುತ್ತಾಳೋ ಇಲ್ಲವೋ ಅಂತ.

ಯಶೋದೆ—ಅವಳು ಮನೆಯಲ್ಲಿಲ್ಲ. ಈಗ ಎಲ್ಲೋ ಹೊರಗೆ ಹೋದಳು. ನಿನ್ನ ಮನಸ್ಸಿನಲ್ಲೇನಿದೆಯೋ ತಿಳಿದುಕೊಳ್ಳೋಣ ಅಂತ ಕೇಳಿದೆ. ಆಷ್ಟೆ. ಅವಳೂ ನಿನ್ನನ್ನು ಪ್ರೀತಿಸುತ್ತಾಳೆ, ನಿಜ.

ಜಯ—ಮತ್ತೆ ನನ್ನನ್ನು ರೇಗಿಸಬೇಕು ಅಂತ ಹಾಗೆ ಕೇಳಿದೆಯಾ?

ಯಶೋದೆ—ಅದಕ್ಕಲ್ಲ ಜಯ. ನಮ್ಮ ತಂದೆ ಕಾಗದ ಬರೆದಿದ್ದಾರೆ. ಈಗ ಊರಿಗೆ ಬಂದ ತಕ್ಷಣ ಮದುವೆ ಮಾಡಿಬಿಡಬೇಕು ಅಂತ.

ಜಯ—ಹೂ. ಆಗಲಿ. ನಾನೂ ಸಿದ್ಧವಾಗಿಯೇ ಇದ್ದೇನೆ.

ಯಶೋದೆ—ಸರಿ. ಹಾಗಂತ ನಾಳೆಯೇ ಕಾಗದ ಬರೆದು ಬಿಡುತ್ತೇನೆ ಬಿಡು. ಅಲ್ಲ ಜಯ, ಎಷ್ಟೋ ವೇಳೆ ನೀನೂ ಅವಳೂ ವಾಕಿಂಗ್ ಹೋಗಿದ್ದೀರಲ್ಲ, ಒಬ್ಬರ ಮಗ್ಗುಲಲ್ಲೊಬ್ಬರು ಹೋಗಿದ್ದೀರಲ್ಲ... ಆವಳು ನಿನ್ನಗೆ ಎಷ್ಟು ಎತ್ತರಕ್ಕೆ ಬರುತ್ತಾಳೆ ಅಂತ ನೋಡಿಕೊಂಡಿ

Sri Vidyabharathi Book Centre, Sringeri

CC-0. In Public Domain. Digitized by eGangotri

ದ್ವೀಯಾ ? ಹೇಳು.

ಜಯ—ಕುತ್ತಿಗೆ ಅಥವಾ ಕಿವಿಯವರೆಗೆ ಬರಬಹುದು. ನಾನ್ಯಾವಾಗಲೂ ಅದನ್ನು ಗಮನಿಸಿಲ್ಲ.

ಯಶೋದೆ—ಸರಿ. ಏತಕ್ಕೆ ಗಮನಿಸಬೇಕು ಹೇಳು. ಸುಮ್ಮನೆ ಕೇಳಿದೆ ಅಷ್ಟೆ. ಅಲ್ಲ, ನೀನೊಂದು ವೇಳೆ ಅವಳಿಗೆ ಒಂದು ಹೂವೋ ಸೆಂಟು ಬಾಟಲನ್ನೊ ತಂದುಕೊಟ್ಟೆ ಅಂತಿಟ್ಟುಕೊ. ಎಂತಹ ಹೂ, ಸೆಂಟು ಬಾಟಲನ್ನು ತಂದು ಕೊಡುತ್ತೆ, ಹೇಳು.

ಜಯ—ರೋಜ ಹೂ ಎಂತಹವರಿಗಾದರೂ ಪ್ರಿಯವಾವದ್ದೇ. ಅದನ್ನೇ ತಂದು ಕೊಡುತ್ತೇನೆ. ಸೆಂಟು ಬಾಟಲಿಗೇನು ಅವಳನ್ನೇ ಕೇಳುವುದು ನಿನಗೆ ಯಾವ ವಾಸನೆಯದು ಬೇಕು ಅಂತ. ಅವಳು ಹೇಳಿದ್ದು ತಂದು ಕೊಡುವುದು. ಅದೇ ಸರಿ ಅಲ್ಲವೆ ?

ಯಶೋದೆ—ಅದೇ ಸರಿ. ಹೆಂಗಸಿಗೆ ಎಂತಹುದು ಬೇಕು ಅಂತ ಗಂಡಸಿಗೆ ಹೇಗೆ ಗೊತ್ತಾಗಬೇಕು. ಅವಳನ್ನೇ ಕೇಳಿ ಅವಳು ಬೇಕೆಂದುದನ್ನೇ ತಂದು ಕೊಟ್ಟರಾಯಿತು....ನಾನು ಹೀಗೆಲ್ಲಾ ಕೇಳುತ್ತೇನೆ ಅಂದುಕೋಬೇಡ ಜಯ....ಅವಳಿಗೆ ಎಂತಹ ಸೀರೆ ಯಾವ ಬಣ್ಣದ್ದು ಒಪ್ಪುತ್ತೆ ಹೇಳಬಲ್ಲೆಯಾ ? ನಾಳೆ ಮದುವೆಗೆ ಜವಳಿ ತರಬೇಕಲ್ಲಾ.

ಜಯ—ನೋಡು. ಗೀತ ಒಳ್ಳೆ ಜೆಲುವೆ. ಜೆಲುವೆಯರಿಗೆ ಯಾವ ಬಣ್ಣವ ಸೀರೆಯಾದರೂ ಒಪ್ಪಿಯೇ ಒಪ್ಪುತ್ತೆ.

ಯಶೋದೆ—ಅದು ನಿಜ ಅನ್ನು. ಆದರೂ ನಿನ್ನ ಶಿಫಾರಸು ?

ಜಯ—ನನ್ನ ಅಭಿರುಚಿಯನ್ನು ಅವಳ ಮೇಲೆ ಹೇರಲು ನನಗಿಷ್ಟವಿಲ್ಲ. ಸೀರೆ ಬಾಬು ಹೆಂಗಸರಿಗೆ ಸೇರಿದ್ದು. ಅವರು ಒಪ್ಪಿದ್ದು ಅವರಿಗೆ.

ಯಶೋದೆ—ಅದು ನಿಜ ಅನ್ನು. ಆದರೆ ಈಗ ಕೆಲವು ದಿವಸಗಳಿಂದ ಏಕೋ ಗೀತಳಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ನೀನದನ್ನ ಗಮನಿಸಿಲ್ಲವೆ ?

ಜಯ—ಇಲ್ಲ.

ಯಶೋದೆ—ಎಲ್ಲೋ ಪರೀಕ್ಷೆ ಕಾಲ. ಓದಿನಲ್ಲಿ ಅದೆಲ್ಲಾ ಎಲ್ಲಿ ಗಮನಕ್ಕೆ ಬರುತ್ತೆ ಹೇಳು.

ಜಯ—ನಿಜ, ನನ್ನ ಗಮನಕ್ಕೆ ಅಂಥದೇನೂ ಬರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಶೋದೆ—ಇಲ್ಲ, ಜಯ. ಅವಳು ಸ್ವಲ್ಪ--ಸ್ವಲ್ಪವೇನು–ಹೆಚ್ಚಾಗಿಯೇ ಅನ್ನು—ಬದಲಾಯಿಸಿ ಬಿಟ್ಟಿದ್ದಾಳೆ. ಮೋಹನ ಕ್ರಮೇಣ ಅವಳ ಮನಸ್ಸನ್ನು ಒಲಿಸಿಕೊಂಡಿರುವ ಹಾಗಿದೆ.

ಜಯ—(ರೇಗಿ) ಯಾರು, ಮೋಹನನೇ? ಏನೋ ಪರೀಕ್ಷೆಯ ಕಾಲ. ಯಾರೊಬ್ಬರ ಹವ್ಯಾಸವಿಲ್ಲದೆ ಓದಿಕೊಂಡಿರಲಿ ಅಂತ ಈ ಮನೆಯಲ್ಲಿ ಅವನನ್ನ ಸೇರಿಸಿದ್ದಕ್ಕೆ ಜೆನ್ನಾಯಿತು. ಅವನಿಗೆ ತಕ್ಕ ಶಿಕ್ಷೆಯನ್ನೇ ಮಾಡಬೇಕು.

ಯಶೋದೆ—ಹಾಗೆ ರೇಗಬೇಡ ಜಯ. ನಿನ್ನಲ್ಲಿಲ್ಲದಿರುವ ಗುಣ ಅವನಲ್ಲೇ ನಿದೆ ಹೇಳು. ಏನೋ ಹುಚ್ಚು ಹುಡುಗ. ಅವನೊಳ್ಳೆ ಮಾತುಗಾರ. ಅವನ ಮಾತಿಗೆ ಮರುಳಾಗಿದ್ದಾಳೆ ಅಂತ ತೋರುತ್ತೆ. ಅದಕ್ಕೇ ಅವನನ್ನು ಊರಿಗೆ ಕಳುಹಿಸಿ ಬೇಗನೆ ನಿನ್ನ ಮದುವೆ ಗೊತ್ತುಮಾಡಿ ಬಿಡೋಣ.

ಜಯ—ಅದು ಸರಿ. ಆಮೇಲಾದರೂ ಅವನಿಗೆ ತಕ್ಕ ಶಿಕ್ಷೆ ಮಾಡಬೇಕು.

ಯಶೋದೆ—ಅದಿರಲಿ. ನೀನು ಗೀತಳನ್ನು ಪ್ರೀತಿಸುವುದಾಗಿ ಹೇಳಲಿಲ್ಲವೆ?

ಜಯ—ಹೂ.

ಯಶೋದೆ—ನಿನ್ನ ಪ್ರೀತಿ ಮೋಹನನ ಪ್ರೀತಿಗಿಂತ ಹೆಚ್ಚಲ್ಲವೆ?

ಜಯ—ಹೌದು.

ಯಶೋದೆ—ಈಗ ಅವನು ಬರುತ್ತಾನಲ್ಲ. ಸುಮ್ಮನೆ ತಮಾಷೆಗೆ ಅವನನ್ನು ಹೀಗೇ ಪ್ರಶ್ನಿಸುತ್ತೀನೆ. ಅವನೇನು ಹೇಳುತ್ತಾನೆ ಎನ್ನುವುದನ್ನು ಕೇಳೋಣ. ಆಗ ಅವನ ಮನಸ್ಸೂ ಗೊತ್ತಾದ ಹಾಗೆ ಆಗುತ್ತೆ. ಏನಂತಿ?

ಜಯ—ಕೇಳು, ಅದಕ್ಕೇನು? ಆದರೆ ನನಗೇನೋ ಅದು ಇಷ್ಟವಿಲ್ಲ.

ಯಶೋದೆ—ಹೌದು. ನನಗೂ ಆದೇನು ಇಷ್ಟವಾದ್ದಲ್ಲ. ಆದರೂ ಅವನು ಏನು ಹೇಳುತ್ತಾನೆ ಎನ್ನುವುದನ್ನು ಕೇಳಬೇಕು ಅಂತ ಕುತೂಹಲ.

ಜಯ—ಆಗಲಿ, ಕೇಳು.

ಯಶೋದೆ—ಆದರೆ ನೀನು ಎದುರಿಗಿರಬಾರದು. ಎದುರಿಗಿರದಿದ್ದರೂ ಅವನೇನು ಹೇಳುತ್ತಾನೆ ಅನ್ನುವುದನ್ನು ನೀನೂ ಕೇಳಬೇಕು.

ಜಯ—ಹೌದು. ಆದರೆ ಅದು ಹೇಗೆ ಸಾಧ್ಯ?

Sri Vidyabharathi Book Centre, Sringeri

CC-O. In Public Domain. Digitized by eGangotri

ಯಶೋದೆ—ನಾನು ಹೇಳುವ ಹಾಗೆ ಮಾಡು. ನೀನು ಈ ಬಲಗಡೆ ಕೋಣೆಯಲ್ಲಿ ಅವಿತುಕೊಂಡಿರು. ಅವನೇನು ಹೇಳುತ್ತಾನೋ ಎಲ್ಲಾ ಕೇಳಿಕೊಂಡಿರು. ಆದರೆ ಒಂದು ಮಾತ್ರ ಭಾಷೆ ಕೊಡಬೇಕು. ನಾನು ಕರೆಯುವವರೆಗೂ ನೀನು ಹೊರಗೆ ಬರಬಾರದು. ಸ್ವಲ್ಪವೂ ಸದ್ದು ಮಾಡಬಾರದು.

ಜಯ—ಆಗಲಿ (ಬಲಗಡೆ ಕೊಠಡಿಯೊಳಕ್ಕೆ ಹೋಗಿ ಚಿಲಕ ಹಾಕಿಕೊಳ್ಳುವನು. ಯಶೋದೆ ಪೇಪರನ್ನು ಕೈಲಿ ಹಿಡಿದುಕೊಂಡಿರುವಳು. ಕ್ಷಣ ಹೊತ್ತಿನ ಮೇಲೆ ಮುಪಡಿಯ ಮೆಟ್ಟಿಲು ಇಳಿದ ಸದ್ದಾಗಿ ಮೋಹನ ಬರುವನು)

ಮೋಹನ—ಎಲ್ಲಿ ಜಯ ?

ಯಶೋದೆ—ಎಲ್ಲೋ ಹೊರಗೆ ಹೋದ, ಬೇಗನೆ ಬರುತ್ತೇನೆಂದು ಹೇಳಿ ಹೋಗಿದ್ದಾನೆ. ಕಾಗದ ಹಾಕುವುದಕ್ಕೆ ಇನ್ನೂ ಹೊತ್ತಿದೆಯಲ್ಲ, ಕೂತುಕೋ (ಮೋಹನ ಕೂತುಕೊಳ್ಳುವನು)

ಮೋಹನ—(ಸಂಕೋಚದಿಂದ) ಪರೀಕ್ಷೆ ಮುಗಿಯಿತು. ಬೇಜಾರಾಗಿದೆ. ಈ ಸಂಜೆ ಗೀತಳನ್ನು ಒಂದು ಸಿನಿಮಾಕ್ಕೆ ಕರೆದುಕೊಂಡು ಹೋಗೋಣ ಅಂತಿದ್ದೇನೆ.

ಯಶೋದೆ—ಆಗಲಿ, ಅವಕ್ಕೇನು.

ಮೋಹನ—ಏನೂ ಇಲ್ಲ. ನೀವೂ ಅವಳೊಡನೆ ಬರಬೇಕು ಅಂತ ನನ್ನ ಪ್ರಾರ್ಥನೆ. ನೀವಿಲ್ಲದೆ ನಾನೊಬ್ಬನೇ ಗೀತಳನ್ನು ಹೇಗೆ ಕರೆದುಕೊಂಡು ಹೋಗಲಿ ?

ಯಶೋದೆ—ಆಗಲೇಳು, ನೀನು ಅಷ್ಟು ಅಭಿಮಾನದಿಂದ ಕರೆದರೆ ನಾನೇಕೆ ಬೇಡ ಅನ್ನಲಿ. ಆದರೆ ಇನ್ನೊಂದು ವಿಚಾರ ನಿನ್ನನ್ನು ಕೇಳಬೇಕು ಅಂತ ಬಹಳ ದಿವಸದಿಂದ ಅಂದುಕೊಂಡಿದ್ದೇನೆ.

ಮೋಹನ—ಅವಕ್ಕೆ ಬಹಳ ದಿವಸಗಳಿಂದ ಏಕೆ ಕಾಯಬೇಕಾಗಿತ್ತು ? ಯಾವಾಗ ಕೇಳಬೇಕು ಅನಿಸಿತೋ ಆಗಲೇ ಆದಿನವೇ ಕೇಳಬಹುದಾಗಿತ್ತಲ್ಲ. ಹೋಗಲಿ, ಏನದು ಹೇಳಿ.

ಯಶೋದೆ—ಗೀತಳಿಗೆ ಮದುವೆ ಮಾಡಬೇಕು ಅಂತ ನಮ್ಮ ತಂದೆ ಕಾಗದ ಬರೆದಿದ್ದಾರೆ.

ಮೋಹನ—ಸರಿಯೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಶೋದೆ—ಅವಳ ಮದುವೆಯ ವಿಚಾರದಲ್ಲಿ ನಿನಗೇನು ಆಸಕ್ತಿ ಇಲ್ಲವೆ?

ಮೋಹನ—ಹಾಗೇಕೆ ಕೇಳುತ್ತೀರಿ ?

ಯಶೋದೆ—ಎರಡು ತಿಂಗಳಿಂದ ಒಂದೇ ಮನೆಯಲ್ಲಿ ವಾಸಮಾಡಿದ ಮೇಲೆ ಲೋಕಾಭಿರಾಮವಾಗಿ ಒಂದು ಬಗೆಯ ಸ್ನೇಹ, ಅಭಿಮಾನ ಬೆಳೆಯುವುದು ವಾಡಿಕೆ. ಹಾಗೆ ಸ್ನೇಹಿತರ ಮದುವೆ ಮುಂಜಿ ಕಷ್ಟ ಸುಖಗಳನ್ನು ತಿಳಿಯುವುದರಲ್ಲಿರುವ ಕುತೂಹಲದ ಹಾಗೆ—ಗೀತಳಿಗೆ ಮದುವೆಯೆಂದರೆ ಆದರ ವಿವರಗಳನ್ನು ತಿಳಿಯಬೇಕು ಎನ್ನುವ ಆಸಕ್ತಿ ಇರಬಹುದೇನೋ ಅಂತ ಹಾಗೆ ಕೇಳಿದೆ, ಅಷ್ಟೆ. ಅಂತಹುದೇನೂ ಇಲ್ಲ ದಿರುವುದಾದರೆ ಕೇಳಿದ್ದು ತಪ್ಪಾಯಿತು ಅಂದುಕೊಳ್ಳುತ್ತೇನೆ.

ಮೋಹನ—ಛೆ. ಛೆ. ನನ್ನ ಮನಸ್ಸಿಗೆ ತುಂಬಾ ನೋವಾಗುವಂತೆ ಮಾತನಾಡುತ್ತೀರಿ. ಗೀತಳ ವಿಷಯದಲ್ಲಿ ನನಗೆ ಬರಿಯ ಅಭಿಮಾನವಲ್ಲ, ಸ್ನೇಹವಲ್ಲ, ಪ್ರೀತಿಯೇ ಬೆಳೆದಿದೆ. ಆದನ್ನು ನಿಮ್ಮ ಮುಂದಲ್ಲದೆ ಯಾರ ಮುಂದೆ ಹೇಳಲಿ ? ಅವಳನ್ನು ನೋಡಿದಾಗಿನಿಂದ ನನ್ನ ಮನಸ್ಸೇ ನನ್ನದಲ್ಲವಾಗಿದೆ. ದೇವರು ಹೇಗಾದರೂ ಅವಳ ಕೈ ಹಿಡಿಯುವ ಸೌಭಾಗ್ಯವನ್ನು ಕರುಣಿಸಲಿ ಅಂತ ಹಗಲಿರುಳೂ ಪ್ರಾರ್ಥಿಸುತ್ತಿರುತ್ತೇನೆ.

ಯಶೋದೆ—ಆದರೆ ಅವಳನ್ನು ಜಯನಿಗೆ ಕೊಟ್ಟು ಮದುವೆ ಮಾಡುವುದೆಂದು ಗೊತ್ತಾಗಿರುವ ವಿಷಯ ನಿನಗೆ ತಿಳಿಯದೆ? ಜಯನಿಗೆ ಗೊತ್ತಾದ ಹೆಣ್ಣಿಗೆ ನೀನು ಆಸೆಪಡಬಹುದೆ ?

ಮೋಹನ—ಆ ವಿಷಯ ಗೊತ್ತು. ನಾನದನ್ನು ಯೋಚಿಸದೆ ಇಲ್ಲ. ನನ್ನ ಮನಸ್ಸು ನಾನೆಷ್ಟು ತಡೆದರೂ ಆದು ಹತೋಟಿಯಲ್ಲಿ ನಿಲ್ಲದಾಗಿದೆ. ಕಡೆಗೆ ಮದುವೆಯಾದರೆ ಅವಳನ್ನು ಮದುವೆಯಾಗಬೇಕು ಇಲ್ಲದಿದ್ದರೆ ಬ್ರಹ್ಮಚಾರಿಯಾಗಿಯೇ ಇರಬೇಕೆಂದು ಸಂಕಲ್ಪಿಸಿದ್ದೇನೆ.

ಯಶೋದೆ—ಹಾಗೆಲ್ಲಾದರೂ ಮಾಡುತ್ತಾರೆಯೆ? ನಿನಗೇನು ರೂಪವಿದ್ಯೆ ಧನ—ಯಾವುದಕ್ಕೆ ಕಡಿಮೆ ಇದೆ. ಗೀತಳಂತಹ ಹೆಣ್ಣುಗಳು ಹತ್ತಾರು ಸಿಗುತ್ತವೆ.

ಮೋಹನ—ಅಂತಹವು ಸಿಗಬಹುದು. ಆದರೆ ಅವಳು ಸಿಕ್ಕಿ ಹಾಗಾಗುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೇನು ? ಈ ವಿಚಾರದಲ್ಲಿ ನನ್ನ ನಿರ್ಧಾರವನ್ನು ಎಂದಿಗೂ ಬದ ಲಾಯಿಸಲಾರೆ. ಅದು ಖಂಡಿತ.

ಯಶೋದೆ—ಈಗ ನೋಡು. ನೀನೂ ಅವಳನ್ನು ಮಾಡಿಕೊಳ್ಳಬೇಕೆಂದಿದ್ದಿ. ಜಯನೂ ಹಾಗೇ ಅನ್ನುತ್ತಾನೆ. ಈ ಸಮಸ್ಯೆಯನ್ನು ಬಿಡಿಸುವವರು ಯಾರು ?

ಮೋಹನ—ಗೀತಳೇ.

ಯಶೋದೆ—ಅಂದರೆ ?

ಮೋಹನ—ನನ್ನ ಅಥವಾ ಜಯನ ಇಷ್ಟವನ್ನು ಅವಳ ಮೇಲೆ ಹೇರ ಬಾರದು. ಅದರಿಂದ ಅವಳನ್ನು ನಿರ್ಬಂಧಪಡಿಸಬಾರದು ಅಂತ ನನ್ನ ಅಭಿಪ್ರಾಯ. ಅವಳೇ ಹೇಳಲಿ ಅವಳಿಗೆ ಯಾರಮೇಲೆ ಪ್ರೀತಿ ಯಿದೆ ಅಂತ. ಅದರಂತೆ ನಾನು ಒಪ್ಪಿಕೊಳ್ಳಲು ಸಿದ್ಧ.

ಯಶೋದೆ—ಒಂದು ವೇಳೆ ಅವಳು ಜಯನನ್ನೇ ವರಿಸಿದರೆ?

ಮೋಹನ—ಸಂತೋಷ. ಮುಖ್ಯ ಅವಳು ಸಂತೋಷವಾಗಿರುವುದೇ ನನಗೆ ಬೇಕಾದುದು. ನಾನು ಪ್ರೀತಿಸುವುದು ಎಂದರೆ ಅವಳನ್ನು ಸುಖ ವಾಗಿಡುವುದು ಎಂದರ್ಥ. ಅವಳು ಜಯನನ್ನೇ ವರಿಸಿದರೆ ನಾನು ಸಂತೋಷದಿಂದಲೇ ಅವಳಿಗೆ ಶುಭವನ್ನು ಕೋರುತ್ತೇನೆ. ಆದರೆ ನಾನು ಮಾತ್ರ ದೇವರು ನನ್ನಮೇಲೆ ದಯೆಯನ್ನು ಬೀರಲಿಲ್ಲವೆಂದು ಕೊಂಡು ಬ್ರಹ್ಮಚಾರಿಯಾಗಿಯೇ ಉಳಿಯುತ್ತೇನೆ.

ಯಶೋದೆ—ನಿನ್ನಪ್ರೀತಿ ಅಷ್ಟು ಗಾಢವಾದುದೇ ?

ಮೋಹನ—ಎಷ್ಟು ಗಾಢವಾದುದು ಎಂದು ಹೇಳಲಾರೆ. ಅದು ಮಾತಿಗೆ ಮೀರಿದ್ದು.

ಯಶೋದೆ—ಒಂದು ವೇಳೆ ಅವಳು ನಿನ್ನನ್ನೇ ಮದುವೆಯಾಗುವೆನೆಂದು ಹೇಳಿದರೆ....

ಮೋಹನ—ರೇ....ಅಂದರೇ ಮೈಮರೆಯುತ್ತೇನೆ. ನಾನೇ ಪುಣ್ಯವಂತ ನೆಂದುಕೊಳ್ಳುತ್ತೇನೆ.

ಯಶೋದೆ—ನಿಮಗೆನಿಮಗೆ ಈಡುಜೋಡು ಸರಿಯಾಗಿರುವುದೆ ?

ಮೋಹನ—ಈಡುಜೋಡು ಎನ್ನುವ ಪದವೇ ಇಲ್ಲಿ ಅರ್ಥವಿರಲಾರದು.

Sri Vidyabharathi Book Centre, Mysore.

CC-O. In Public Domain. Digitized by eGangotri

ಆವಳು ಸರಿಯಾಗಿ ನನ್ನ ಕಿವಿಗೆ ಬರುತ್ತಾಳೆ. ಅವಳು ತಲೆಯೆತ್ತಿದರೆ ನನ್ನ ಮುಖ ಅವಳ ಮುಖಕ್ಕೆ ಎದುರು ನಿಲ್ಲುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಇಬ್ಬರ ಮೈಬಣ್ಣವೂ ಒಂದೇ. ಅವಳು ರೋಜಾಬಣ್ಣದ ಸೀರೆಯುಟ್ಟು ಆ ಹೂವಿನ ಜಾಕೀಟು ತೊಟ್ಟು ಮಲ್ಲಿಗೆಯ ಮೊಗ್ಗನ್ನು ತುರುಬಿಗೆ ಸುತ್ತಿ ಮಂದಹಾಸವನ್ನು ಬೀರುತ್ತಾ ನನ್ನ ಎದಿಗೆ ಒರಗಿ ನಿಂತರೆ ರಾಮ ಸೀತೆಯರ ಹಾಗೆ ಚಂದವೇ ಚಂದ, ಆನಂದವೇ ಆನಂದ....ಕ್ಷಮಿಸಿ. ಇದೇನೋ ಸ್ವಪ್ನದಲ್ಲಿ ಕಂಡಹಾಗೆ ಏನೇನೋ ಮಾತನಾಡುತ್ತಿದ್ದೇನೆ. ಅವಳನ್ನು ನೆನೆಸಿದಾಗಲೆಲ್ಲಾ ಈ ಚಿತ್ರ ನನ್ನ ಕಣ್ಣಿಗೆ ಕಟ್ಟುತ್ತದೆ. ಏನು ಮಾಡಲಿ ? ಮೊನ್ನೆ ಪೇಟೆಗೆ ಹೋಗಿದ್ದಾಗ ನನ್ನ ಸ್ನೇಹಿತ ಅವನ ಹೆಂಡತಿಗೊಂದು ಸೆಂಟುಬಾಟಲನ್ನು ಕೊಂಡುಕೊಂಡ. ನಾನೂ ಯೋಚಿಸಿದೆ. ಗೀತಳಿಗೆ ಮಲ್ಲಿಗೆಹೂ ಎಂದರೆ ಪ್ರಾಣ. ಅದರಿಂದ ಮಾಡಿದ "ಜಾಸ್ಮಿನ್ ಸೆಂಟು" ಅವಳಿಗೆ ತುಂಬಾ ಪ್ರಿಯವಾದುದೆಂದು ಕೊಂಡುಕೊಂಡೆ. ಆದರೆ ನೀವೇನು ತಿಳಿದುಕೊಳ್ಳುತ್ತೀರೋ ಅಥವಾ ಅವಳೇನು ತಿಳಿದುಕೊಳ್ಳುತ್ತಾಳೋ ಎಂದು ಇನ್ನೂ ಅವಳಿಗೆ ಕೊಟ್ಟೇ ಇಲ್ಲ.

ಯಶೋದೆ—ಏನು ತಿಳಿದುಕೊಳ್ಳುತ್ತಾಳೆ. ಕೊಡು ಇಲ್ಲಿ ನಾನವಳಿಗೆ ಕೊಡುತ್ತೇನೆ. ಜಯಾ! ಗೀತ! ಇಬ್ಬರೂ ಬನ್ನಿ.

[ಇಬ್ಬರೂ ಎರಡು ಕಡೆ ಕೊಠಡಿಗಳ ಬಾಗಿಲು ತೆಗೆದುಕೊಂಡು ಬರುವರು. ಮೋಹನನಿಗೆ ದಿಗ್ಭ್ರಮೆಯಾಗುವುದು]

ಮೋಹನ—ಇದೇನೋ ಆಟ ಹೂಡಿರುವ ಹಾಗಿದೆ ನೀವು.

ಯಶೋದೆ—ಆಟವಲ್ಲ. ಎಲ್ಲಿ ನಿನ್ನ ಸೆಂಟುಬಾಟಲು ಕೊಡು.

ಮೋಹನ—ಮಹಡಿಯ ಮೇಲಿದೆ. ತರುತ್ತೇನೆ [ಹೋಗುವನು]

ಯಶೋದೆ—ಜಯ, ಮೋಹನನೇ ಗೀತಳಿಗೆ ತಕ್ಕ ಗಂಡ. ನೀನು ಕಣ್ಣಿದ್ದೂ ಕುರುಡನಾದೆ. ಅವನ ಪ್ರೀತಿಯೆ ಹೆಚ್ಚು. ಗೀತಳು ನಿನ್ನನ್ನು ಮದುವೆಯಾಗುವಳೆಂದು ಹೇಳಿದಾಗ ಅವನ ಮನಸ್ಸು ಹೇಗೆ ಔದಾರ್ಯವನ್ನು ತೋರಿಸುತ್ತಿತ್ತು ನೋಡು. ನೀನು ಅಸೂಯೆ ಪಡಬೇಡ. ಗೀತಳು ಮೋಹನನನ್ನೇ ಮದುವೆಯಾಗಲಿ. ಅವಳಿಗೂ ಅದೇ ಇಷ್ಟ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಯ—ಅವಳಿಗೂ ಅದೇ ಇಷ್ಟವಾದ ಮೇಲೆ ಅವಳ ಇಷ್ಟಕ್ಕೆ ವಿರೋಧವಾಗಿ ನಾನವಳನ್ನು ಮದುವೆಯಾದರೆ ತಾನೇ ಏನು ಸುಖ? ಹಾಗೇ ಆಗಲಿ.

ಯಶೋದೆ—ಏನೇ ಗೀತ ಒಪ್ಪಿಗೆ ತಾನೇ ?

ಗೀತ—ಒಪ್ಪಿಗೇನೇ. ಆದರೆ ...

ಯಶೋದೆ—ಏನು ರೇ .. ಅಂತ ರಾಗ ತೆಗೆತಿದ್ದೀಯಲ್ಲಾ ತಿರುಗ?

ಗೀತ—ಅಪ್ಪ ಏನಂತಾನೋ.

ಯಶೋದೆ—ನಾನಾಗಲೇ ಈ ಸೂಕ್ಷ್ಮ ಅವನಿಗೆ ತಿಳಿಸಿದ್ದೆ. ಗೀತ ಒಪ್ಪಿದ ವರ ಆಗಲಿ ಅಂತ ಅವನು ಕಾಗದದಲ್ಲಿ ಬರೆದಿದ್ದಾನೆ. ಅದಕ್ಕೇ ನಿನಗೆ ಮೊದಲೇ ತೋರಿಸಲಿಲ್ಲ. ಈಗ ನೋಡುವೆಯಂತೆ. (ಅಷ್ಟು ಹೊತ್ತಿಗೆ ಮೋಹನ ಸೆಂಟು ಬಾಟಲನ್ನು ತರುವನು)

ಮೋಹನ—(ಯಶೋದೆಯ ಕಡೆ ಕೈಚಾಚಿ) ತೊಗೊಳ್ಳಿ.

ಯಶೋದೆ—ನನಗೇಕೆ ಕೊಡುತ್ತೀಯಪ್ಪಾ. ಯಾರು ಹಕ್ಕುದಾರರೋ ಅವರಿಗೆ ಕೊಡು.

(ಮೋಹನ ಗೀತಳಿಗೆ ಅದನ್ನು ಕೊಡುವನು. ಇಬ್ಬರೂ ಒಬ್ಬರನ್ನೊಬ್ಬರು ನೋಡಿ ನಗುವರು. ಗೀತ ಸೆಂಟು ಬಾಟಲನ್ನು ತೆಗೆದುಕೊಂಡು ಮೂಸಿ ನೋಡುವಳು.)

ಯಶೋದೆ—ಗೀತ, ಸಿನಿಮಾಕ್ಕೆ ಹೊತ್ತಾಗುತ್ತೆ, ಏಳು. ಹೆರಳು ಹಾಕಿ ಕೊಂಡು ತುರುಬು ಕಟ್ಟಿಕೋ. ರೋಜಾ ಬಣ್ಣದ ಸೀರೆ ಉಟ್ಟು ಕೊಂಡು ಹೂವಿನ ಜಾಕೀಟು ಹಾಕಿಕೊ, ಹೋಗು. ಹಾಗೇ ಹೋಗು ವಾಗ ಹೂವಿನಂಗಡಿಯಲ್ಲಿ ಮಲ್ಲಿಗೆಯ ತುರುಬೊಂದನ್ನು ಕಟ್ಟಿ ಕೊಂಡು ಹೋಗು.

ಗೀತ—ನೀನು ಬರೋದಿಲ್ಲವೆ ?

ಯಶೋದೆ—ಇನ್ನು ನಾನೇಕೆ ಬರಬೇಕು. ನೀನು ಮೋಹನ ಇಬ್ಬರೆ ಹೋಗಿ ಬನ್ನಿ.

ಗೀತ—(ನಗುತ್ತಾ ಕಣ್ಣರಳಿಸಿ) ಆ!

[ಎಲ್ಲರೂ ನಗುತ್ತಾರೆ. ಗೀತಳು ಒಳಗೆ ಹೋಗುತ್ತಿರುವ ಹಾಗೆ ತೆರೆ ಬೀಳುವುದು.]

Sri Vidyabharathi Book Centre, Sringeri